

ಗ್ರೀಸ್ ರಾಜಧಾನಿ ಅಥೆನ್ಸ್‌ನಲ್ಲಿರುವ ರಾಷ್ಟ್ರೀಯ ಪ್ರಾಕ್ತನನ ಮ್ಯೂಸಿಯಂನಲ್ಲಿನ ಆಂಟಿಕಿತೆರಾ ಮೆಕ್ಯಾನಿಸಂ

# ಆಂಟಿಕಿತೆರಾ ಮೆಕ್ಯಾನಿಸಂ

## ವಿಜ್ಞಾನದ ಮರೆತ ಕುರುಹು

**ಅಥೆನ್ಸ್‌ನ ಮ್ಯೂಸಿಯಂನಲ್ಲಿರುವ 'ಆಂಟಿಕಿತೆರಾ ಮೆಕ್ಯಾನಿಸಂ', ಪ್ರಾಚೀನ ವಿಜ್ಞಾನ ಮತ್ತು ತಂತ್ರಜ್ಞಾನದ ಅದ್ಭುತ ಉಪಕರಣ. ಎರಡು ಸಾವಿರ ವರ್ಷಗಳ ಹಿಂದೆ ರೂಪುಗೊಂಡ ಈ ಸಾಧನ, ವೈಜ್ಞಾನಿಕ ಜಗತ್ತಿನ ವಿಶಿಷ್ಟ ವಸ್ತುವಾಗಿದ್ದು, ಈ ಬಗ್ಗೆ ಅಧ್ಯಯನಗಳು ನಡೆಯುತ್ತಲೇ ಇವೆ.**

**■ ಡಾ. ಜೆ. ಬಾಲಕೃಷ್ಣ**

ನಾನು ಅತ್ಯಂತ ಕುತೂಹಲದಿಂದ ನೋಡಬೇಕೆಂದಿದ್ದ ಒಂದು ಉಪಕರಣ ಗ್ರೀಸ್ ರಾಜಧಾನಿ ಅಥೆನ್ಸ್‌ನ ರಾಷ್ಟ್ರೀಯ ಪ್ರಾಕ್ತನನ ಮ್ಯೂಸಿಯಂನಲ್ಲಿತ್ತು. ಅದನ್ನು ನೋಡುವ ಅವಕಾಶ ಗ್ರೀಸ್ ಭೇಟಿಯ ಸಮಯದಲ್ಲಿ ನನಗೆ ಒದಗಿಬಂದಿತ್ತು.

ಆ ಉಪಕರಣದ ಚರಿತ್ರೆ ಬಹಳ ಕುತೂಹಲಕರ. ಅದು ಆಧುನಿಕ ಜಗತ್ತಿಗೆ ದೊರಕಿದ್ದು 123 ವರ್ಷಗಳ ಹಿಂದೆ, ಅದೂ ಆಕಸ್ಮಿಕವಾಗಿ.

ಸುಮಾರು 2000 ವರ್ಷಗಳ ಹಿಂದೆ (ಕ್ರಿ.ಪೂ. 65) ಒಂದು ಹಡಗು ಏಷಿಯಾ ಮೈನರ್‌ನಿಂದ ಹಾಯಿ ಏರಿಸಿ ತನ್ನ ಪ್ರಯಾಣ ಆರಂಭಿಸಿತು. ಬಹುಶಃ ಅದೊಂದು ರೋಮನ್ ಹಡಗಾಗಿದ್ದು, ಗ್ರೀಕರ ದೇಶದಲ್ಲಿ ಲೂಟಿ ಮಾಡಿದ ವಸ್ತುಗಳನ್ನು ರೋಮ್‌ಗೆ ಕೊಂಡೊಯ್ಯುತ್ತಿತ್ತು. ಆ ಅವಧಿಯಲ್ಲಿ ರೋಮ್ ಸೇನಾನಾಯಕ ಪಾಂಪೆ ಏಷಿಯಾ ಮೈನರ್ ಪ್ರದೇಶದಲ್ಲಿ ಓಡಾಡುತ್ತಿದ್ದುದರಿಂದ ಆ ಹಡಗು ಅವನಿಗೆ ಸೇರಿದ್ದಾಗಿರಬಹುದು. ಯಾವುದಾದರೂ ಚಂಡಮಾರುತವೋ ಮತ್ತಾವುದಾದರೂ ದುರಂತಕ್ಕೆ ಸಿಲುಕಿತೋ ಏನೋ, ಆ ಹಡಗು ತನ್ನಲ್ಲಿದ್ದ ಎಲ್ಲ ವಸ್ತುಗಳೊಂದಿಗೆ ಮುಳುಗಿಹೋಯಿತು ಹಾಗೂ ಜಗತ್ತು ಅದನ್ನು ಮರೆತೇಬಿಟ್ಟಿತು.

1900ರಲ್ಲಿ ಆಂಟಿಕಿತೆರಾ ದ್ವೀಪದ ಬಳಿ, ತಮ್ಮ ಜೀವನೋಪಾಯಕ್ಕಾಗಿ ಸಾಗರದಾಳಕ್ಕೆ ಮುಳುಗಿ ಅಲ್ಲಿಂದ ಸ್ಪಾಂಜ್ ಸಂಗ್ರಹಿಸುತ್ತಿದ್ದ ಆಳ ಈಜುಗಾರರಿಗೆ ಸಮುದ್ರದಾಳದಲ್ಲಿ ಮುಳುಗಿದ್ದ ಹಡಗಿನ ಅವಶೇಷಗಳು, ಅಮೃತಶಿಲೆಯ ಮಾನವರ ವಿಗ್ರಹಗಳು, ರಾಶಿರಾಶಿ ಕಂಚಿನ ಲೋಹದ ವಸ್ತುಗಳು ದೊರೆತವು. ಗ್ರೀಕ್ ಸರ್ಕಾರ ಕೂಡಲೇ ಆ ಅವಶೇಷಗಳನ್ನು ಮೇಲೆ



ಮ್ಯೂಸಿಯಂನಲ್ಲಿ ಆಂಟಿಕಿತೆರಾ ಮೆಕ್ಯಾನಿಸಂನ ಮಾದರಿ